**ದಿನಾಂಕಃ 06.11.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಟಿ ಜಿ ವಿ ವಕೀಲರಿಂದಃ ವಾದಿ ಪರವಾಗಿಃ**

ನಮ್ಮ ತಂದೆ ತಾಯಿಗೆ ಸರೋಜಮ್ಮ, ವಿಜಯಮ್ಮ ಮತ್ತು ಶಾರದಮ್ಮ ಎಂದು ಮೂರು ಜನ ಹೆಣ್ಣುಮಕ್ಕಳು. ರಾಮಚಂದ್ರಯ್ಯ, ಶೇಖರಯ್ಯ ಮತ್ತು ಬಸವರಾಜು ಗಂಡುಮಕ್ಕಳು ಅಂದರೆ ನಿಜ. ಶೇಖರಯ್ಯನ ಮಕ್ಕಳು ಗಜೇಂದ್ರ ಮತ್ತು ಕಾರ್ತಿಕ್ ಅಂದರೆ ನಿಜ. ಶಾರದಮ್ಮ ಮೃತಪಟ್ಟಿದ್ದು ಅವರಿಗೆ ಯತೀಶ್ ಎಂಬ ಒಬ್ಬ ಮಗ ಇರುತ್ತಾನೆ ಅಂದರೆ ನಿಜ. ಮಂಜೇಶ್, ಸಹನಾ ಮತ್ತು ವಾದಿ ಶರತ್ ಕುಮಾರ್ ಬಸವರಾಜುವಿನ ಮಕ್ಕಳು ಅಂದರೆ ನಿಜ. ದಾವಾ ಆಸ್ತಿಗಳು ಬೋರಪ್ಪನವರಿಗೆ ಸೇರಿದ ಆಸ್ತಿಗಳು ಅಂದರೆ ಸರಿಯಲ್ಲ. ನನಗೆ ಸೇರಿದ ಆಸ್ತಿಗಳು ಇರುತ್ತವೆ. ನಾನು ಒ.ಎಸ್ 227/1995 ರಂತೆ ನನ್ನ ಆಸ್ತಿಗಳನ್ನು ನನ್ನ ತಂದೆಗೆ ಮಾರಾಟ ಮಾಡಿದ್ದೆ ಅಂದರೆ ನಿಜ. ನಂತರ ಅದನ್ನು ನಾನು ಪ್ರಶ್ನಿಸಿರುತ್ತೇನೆ. ಆಸ್ತಿಗಳನ್ನು ಮಾರಾಟ ಮಾಡಿದ ಬಗ್ಗೆ ಪ್ರಶ್ನಿಸಿದ ದಾವೆ 76/2000 ಇರುತ್ತದೆ. ನಾನು ಸದರಿ ದಾವೆಯನ್ನು ನನ್ನ ಹೆಣ್ಣುಮಕ್ಕಳೊಂದಿಗೆ ಕೂಡಿಕೊಂಡು ಹಾಕಿಸಿದ ದಾವೆ ಅಂದರೆ ಸರಿಯಲ್ಲ. ಆ ದಾವೆಯಲ್ಲಿ ನಾನು ಉದ್ದೇಶಪೂರಕವಾಗಿ ವಂಶವೃಕ್ಷದಲ್ಲಿ ಬೋರಪ್ಪನ ಎಲ್ಲಾ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಓ ಎಸ್ 76/2000 ರಲ್ಲಿ ಬೋರಪ್ಪನ ಎಲ್ಲಾ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆ 2005 ರಲ್ಲಿ ಮೃತಪಟ್ಟರು ಅಂದರೆ ನಿಜ. ಓ ಎಸ್ 76/2000 ರ ಪ್ರಕರಣ 2006 ರಲ್ಲಿ ತೀರ್ಪು ಆಗಿರುತ್ತದೆ.

**ಮುಂದುವರಿದ ಪಾಟೀಸವಾಲುಃ** ಕೋರಿಕೆ ಮೇರೆಗೆ ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.